# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 17.03.2011

ಕೆಂಪೇಗೌಡ ಸ್ಮಾರಕ ವಸ್ತು ಸಂಗ್ರಹಾಲಯವನ್ನು ಶಾಶ್ವತವಾಗಿ ಸ್ಥಾಪಿಸುವ ಹಿನ್ನೆಲೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ವಿಶಾಲವಾದ ಸ್ಥಳವನ್ನು ಹುಡುಕಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಪೂಜ್ಯ ಮಹಾಪೌರರಾದ ಶ್ರೀ ಎಸ್.ಕೆ.ನಟರಾಜ್ ರವರು ತಿಳಿಸಿದರು.

ತಮ್ಮ ಅಧ್ಯಕ್ಷತೆಯಲ್ಲಿ ಇಂದು ನಡೆದ ವಸ್ತು ಸಂಗ್ರಹಾಲಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಮಲ್ಲೇಶ್ವರದ ಬಳಿ ಸುಮಾರು ಆರು ಎಕರೆ ಜಾಗ ಇರುವುದಾಗಿ ತಿಳಿದುಬಂದಿದ್ದು, ಈ ಸಂಬಂಧ ಸಧ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸಧ್ಯ ಮೇಯೋಹಾಲ್‌ನ ಕಟ್ಟಡದಲ್ಲಿ ವಸ್ತು ಸಂಗ್ರಹಾಲಯ ಸ್ಥಾಪನೆಗೆ ಸಿದ್ಧತೆಗಳನ್ನು ನಡೆಸಲಾಗಿದ್ದು, ಇದರ ಉದ್ಘಾಟನೆಯನ್ನು ಏಪ್ರಿಲ್ - 7ರಂದು ನಡೆಸಲು ತೀರ್ಮಾನಿಸಿದ್ದು, ಈ ಸಂಬಂಧ ಇಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರಿಗೆ ಆಹ್ವಾನ ನೀಡಿದ್ದು, ಇದಕ್ಕೆ ಮುಖ್ಯಮಂತ್ರಿಗಳು ಸಮ್ಮತಿ ವ್ಯಕ್ತಪಡಿಸಿದ್ದಾರೆ ಎಂದು ಮಹಾಪೌರರು ತಿಳಿಸಿದರು.

ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಬೇಕೆಂಬ ನಿರ್ಧಾರ 2000 ನೇ ಸಾಲಿನಲ್ಲೇ ಆಗಿತ್ತು. ಇದಕ್ಕಾಗಿ ರೂ. 5 ಕೋಟಿಗಳನ್ನು ಮಿಸಲಿರಿಸಲಾಗಿದ್ದು, ಆದರೂ ಕಾಮಗಾರಿ ಕುಂಠಿತವಾಯಿತು. ಇದೀಗ ಹಿರಿಯ ಸಾಹಿತಿಗಳಾದ ದೇ.ಜವರೇಗೌಡರು, ಹಿರಿಯ ಅಧಿಕಾರಿ ಚಿರಂಜೀವಿ ಸಿಂಗ್, ಇವರುಗಳ ಮುತುವರ್ಜಿ ಹಾಗೂ ಪಾಲಿಕೆಯ ಒತ್ತಾಸೆಯಿಂದಾಗಿ ಅದರ ಉದ್ಘಾಟನೆಗೆ ಈಗ ಕಾಲ ಕೂಡಿ ಬಂದಿದೆ ಎಂದು ಮಹಾಪೌರರು ವಿವರಿಸಿದರು.

ಲಂಡನ್‌ನ ಬ್ರಿಟಿಷ್ ಲೈಬ್ರರಿಯಲ್ಲಿರುವ ಅನೇಕ ಪುಸ್ತಕಗಳಲ್ಲಿ ಕೆಂಪೇಗೌಡರ ಜೀವನ ಆಧರಿಸಿದ ಮಾಹಿತಿಗಳು ಲಭ್ಯವಿದ್ದು, ಇವುಗಳನ್ನು ತರಿಸಿಕೊಳ್ಳಲು ಈಗಾಗಲೇ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ. ಅಲ್ಲದೇ, ಕೆಂಪೇಗೌಡರ ವಂಶಸ್ಥರು ಅಥವಾ ಸಾರ್ವಜನಿಕರು ತಮ್ಮ ಬಳಿ ಕೆಂಪೇಗೌಡರಿಗೆ ಸಂಬಂಧಪಟ್ಟ ಯಾವುದೇ ವಿಷಯಗಳಿರಲಿ, ವಸ್ತುಗಳಿರಲಿ, ಮಾಹಿತಿಗಳಿರಲಿ, ಅವುಗಳನ್ನು ಸಂಗ್ರಹಾಲಯ ಸಮಿತಿಗೆ ಕೊಡುಗೆಯಾಗಿ ನೀಡುವಂತೆ ಮಹಾಪೌರರು ಈ ಸಂದರ್ಭದಲ್ಲಿ ಮನವಿ ಮಾಡಿದರು.

ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ, ಶ್ರೀ ಬಿ.ವಿ.ಗಣೇಶ್, ಬಿ.ಬಿ.ಎಂ.ಪಿ ಸದಸ್ಯರುಗಳಾದ ಶ್ರೀಮತಿ ಗೀತಾ ಶ್ರೀನಿವಾಸ್ ರೆಡ್ಡಿ, ಶ್ರೀ ಶಿವಕುಮಾರ್, ಹಿರಿಯ ಐ.ಎ.ಎಸ್. (ನಿವೃತ್ತ) ಶ್ರೀ ಚಿರಂಜೀವಿ ಸಿಂಗ್, ಪೂರ್ವ ವಲಯದ ಜಂಟಿ ಆಯುಕ್ತರಾದ ಶ್ರೀ ಶಿವಶಂಕರ್, ವಸ್ತು ಸಂಗ್ರಹಾಲಯದ ಕ್ಯೂರೇಟರ್ ಶ್ರೀ ದೇವರಕೊಂಡಾ ರೆಡ್ಡಿ ಮೊದಲಾದವರು ಈ ಸಭೆಯಲ್ಲಿ ಇದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 17.03.2011**

ಇಂದು ಬೆಳಿಗ್ಗೆ ಪೂಜ್ಯ ಮಹಾಪೌರರಾದ ಶ್ರೀ ಎಸ್.ಕೆ.ನಟರಾಜ್ ರವರು ವಸ್ತು ಸಂಗ್ರಹಾಲಯದ ಅಧ್ಯಕ್ಷರು ಹಾಗೂ ವಿಶ್ರಾಂತಿ ಕುಲಪತಿಗಳೂ ಆದ ಶ್ರೀ ದೇ.ಜವರೇಗೌಡರ ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರಿಗೆ ಏಪ್ರಿಲ್ – 7 ಕ್ಕೆ ನಿಗದಿಪಡಿಸಿರುವ ವಸ್ತು ಸಂಗ್ರಹಾಲಯದ ಉದ್ಘಾಟನೆಗೆ ಆಗಮಿಸುವಂತೆ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಪಕ್ಷದ ನಾಯಕರಾದ ಶ್ರೀ ಕಟ್ಟೆ ಸತ್ಯನಾರಾಯಣ, ಸಮಿತಿಯ ಸದಸ್ಯರಾದ ಶ್ರೀ ರಾ.ತಿಮ್ಮೇಗೌಡ ರವರು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 17.03.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಡಿವಾಳದ ಜಕ್ಕಸಂದ್ರ ಬಳಿ ದಿನಾಂಕ: 21.11.2010 ರಂದು ವಿಷಮಿಶ್ರಿತ ಆಹಾರ ಸೇವನೆಯಿಂದಾಗಿ 18 ಬೀದಿನಾಯಿಗಳು ಮರಣ ಹೊಂದಿರುವ ಹಿನ್ನೆಲೆ ಜಂಟಿ ನಿರ್ದೇಶಕರು (ಪಶುಪಾಲನೆ), ಸಹಾಯಕ ನಿರ್ದೇಶಕರು (ಪಶುಪಾಲನೆ) ಮತ್ತು ಮಡಿವಾಳ ಪೋಲಿಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ರವರುಗಳು ಸ್ಥಳ ತಪಾಸಣೆ ನಡೆಸಿ, ಸತ್ತ 18 ಬೀದಿನಾಯಿಗಳಲ್ಲಿ ಒಂದು ಹೆಣ್ಣು ನಾಯಿಯನ್ನು ಮರಣೋತ್ತರ ಪರೀಕ್ಷೆಗಾಗಿ ಹೊಂಬೇಗೌಡನಗರ ಪಶುಚಿಕಿತ್ಸಾಲಯಕ್ಕೆ ಸಾಗಿಸಿ, ಉಳಿದ ಮೃತದೇಹಗಳನ್ನು ವಿಲೇವಾರಿ ಮಾಡಲಾಯಿತು.

ನಾಯಿಗಳು ಮೃತಪಟ್ಟ ಸ್ಥಳದಲ್ಲಿ ದೊರೆತ ವಿಷಮಿಶ್ರಿತ ಕಬಾಬ್ ತುಂಡನ್ನು ಪಶುವೈದ್ಯಕೀಯ ಮಹಾವಿದ್ಯಾಲಯಕ್ಕೆ ಕಳುಹಿಸಲಾಯಿತು. ಮಹಾವಿದ್ಯಾಲಯದ ಫಾರ್ಮಕಾಲಜಿ ವಿಭಾಗದವರ ಸಲಹೆಯಂತೆ ಮಡಿವಾಳ ಪೋಲಿಸ್ ಠಾಣೆ ಮುಖಾಂತರ Forensic Science Laboratory ಮಡಿವಾಳ ರವರಿಗೆ ದಿನಾಂಕ: 23.11.2010 ರಂದು ಕಳುಹಿಸಲಾಗಿತ್ತು. ಹಾಗೂ ಈ ಘಟನೆ ಬಗ್ಗೆ ನ್ಯಾಯ ವಿಜ್ಞಾನ ಪ್ರಯೋಗಾಲಯದಿಂದ ಪರೀಕ್ಷಾ ವರದಿ ಬಂದಿದ್ದು, ಸದರಿ ವರದಿಯಲ್ಲಿ Carbamate insecticide ಇಂದ ನಾಯಿಗಳು ಮೃತಪಟ್ಟಿರುವ ಬಗ್ಗೆ ವರದಿ ಇರುತ್ತದೆ ಎಂದು ಉಪ ಆಯುಕ್ತರು (ಆರೋಗ್ಯ) ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**